APRIL 22, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಪರಿಸರ ಸ್ನೇಹಿ ಹೆಜ್ಜೆ;** ಹಾಸನ ತಾಲೂಕು, ಬಿರಡಹಳ್ಳಿ ಗ್ರಾಮ ಪಂಚಾಯಿತಿ, ರಾಷ್ಟ್ರೀಯ ಪುರಸ್ಕಾರಕ್ಕೆ ಆಯ್ಕೆ.
- **ಗಿಗ್ ಕಾರ್ಮಿಕರ ಯೋಗಕ್ಷೇಮ;** ಅಗ್ರಿಗೇಟರ್ ಸಂಸ್ಥೆಗಳಿಂದ, ಶೇಕಡ 5ರಷ್ಟು ಸುಂಕ ಸಂಗ್ರಹಕ್ಕೆ, ಕಾರ್ಮಿಕ ಇಲಾಖೆ, ನಿಶ್ಚಯ.
- **ರಾಜಿ ಸಂಧಾನಕ್ಕೆ ಯೋಗ್ಯ ಪ್ರಕರಣ;** 26ನೇ ತಾರೀಖು, ವಿಶೇ ' ಲೋಕ ಅದಾಲತ್‌ನಲ್ಲಿ, ಇತ್ಯರ್ಥ – ನ್ಯಾಯಮೂರ್ತಿ ವಿ.ಕಾಮೇಶ್ವರರಾವ್.
- **ವರಕವಿ ದ.ರಾ.ಬೇಂದ್ರೆ ಅವರ,** 'ನಾಕುತಂತಿ' ಕೃತಿಯ ಷಷ್ಟಿಪೂರ್ತಿ; ಅಖಿಲ ಭಾರತ ಸಾಹಿತ್ಯ ಪರಿಷತ್ತಿನಿಂದ, ವರ್ಷಪೂರ್ತಿ ಕಾರ್ಯಕ್ರಮ.

<><><>

**ಈಗ ವಾರ್ತೆಗಳ ವಿವರ**

<><><>

**ಹಾಸನ ತಾಲೂಕು, ಬಿರಡಹಳ್ಳಿ ಗ್ರಾಮ ಪಂಚಾಯಿತಿ,** ರಾಷ್ಟ್ರೀಯ ಪುರಸ್ಕಾರಕ್ಕೆ ಆಯ್ಕೆಯಾಗಿದೆ. 4 ಸಾವಿರದ ನೂರಾ 45 ಜನಸಂಖ್ಯೆ ಹಾಗೂ 11 ಜನ ಚುನಾಯಿತ ಪ್ರತಿನಿಧಿಗಳನ್ನು ಹೊಂದಿರುವ ಈ ಗ್ರಾಮ, ಹಸಿರು ವನರಾಶಿಯ ನಡುವೆ, ಇಂಗಾಲದ ಶೂನ್ಯ ಹೆಜ್ಜೆ ಸೃಷ್ಟಿಸುವತ್ತ ದಾಪುಗಾಲಿರಿಸಿದೆ.

<><><>

**ಗ್ರಾಮ ಪಂಚಾಯಿತಿ ಕಚೇರಿಗೆ,** ಸೌರ ವಿದ್ಯುತ್ ಮೇಲ್ಛಾವಣಿ ಅಳವಟ್ಟಿದೆ. ಮಳೆ ಮಾಪನ ಯಂತ್ರ, ಸೌರ ವಿದ್ಯುತ್ ಬೇಲಿ ಹಾಗೂ ಅಂಚೆ ಕಚೇರಿ ಸಹ ಸೋಲಾರ್ ವಿದ್ಯುತ್‌ನಿಂದ ಕಾರ್ಯ ನಿರ್ವಹಿಸುತ್ತಿದೆ.

<><><>

**ಗ್ರಾಮದಲ್ಲಿ, ಇಪ್ಪತ್ತು ಸೋಲಾರ್ ಹೈ ಮಾಸ್ಟ್‌ಗಳು,** 190 ಸೋಲಾರ್ ಬೀದಿ ದೀಪಗಳು, ಹಲವು ಮನೆಗಳೂ ಸಹ, ಸೌರ ವಿದ್ಯುತ್, ಸೌರ ಒಲೆ ಮೂಲಕ ನೀರು ಕಾಯಿಸುವ ವ್ಯವಸ್ಥೆ ಅಳವಡಿಸಿಕೊಂಡು, ಗಮನ ಸೆಳೆದಿವೆ.

<><><>

**ಸೋಲಾರ್ ಲ್ಯಾಂಟರ್ನ್‌**, ಗ್ರಾಮ ಪಂಚಾಯ್ತಿ, ದುರ್ಬಲ ವರ್ಗದ ಬಡ ಕುಟುಂಬಗಳಿಗೆ ಉಚಿತವಾಗಿ ವಿತರಿಸಿದೆ. ಬಿರಡಹಳ್ಳಿ ಗ್ರಾಮದಲ್ಲಿ, ಅನಗತ್ಯ ವಾಹನ ಬಳಕೆ ನಿಷೇಧಿಸಲಾಗಿದ್ದು, ಇಲೆಕ್ಟ್ರಿಕ್ ವಾಹನಗಳ ಬಳಕೆಯನ್ನು ಪ್ರೋತ್ಸಾಹಿಸಲಾಗುತ್ತಿದೆ.

<><><>

**ಗಿಗ್ ಕಾರ್ಮಿಕರ ಆರೋಗ್ಯದ ಹಿತದೃಷ್ಟಿಯಿಂದ,** ಅಗ್ರಿಗೇಟರ್ ಸಂಸ್ಥೆಗಳಿಂದ, ಶೇಕಡ 5 ರಷ್ಟು ಸುಂಕ ಸಂಗ್ರಹಿಸಲಾಗುವುದು ಎಂದು, ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ್, ತಿಳಿಸಿದ್ದಾರೆ. ಧಾರವಾಡದಲ್ಲಿ ಈ ವಿಷಯ ತಿಳಿಸಿದ ಅವರು, ಓರ್ವ ಗಿಗ್ ಕಾರ್ಮಿಕ, ಸರಾಸರಿ ಇಪ್ಪತ್ತು ವ ರ್ಷ ಕೆಲಸ ಮಾಡಿದಲ್ಲಿ, ಸೇವಿಸಿದ ಇಂಗಾಲದ ಪ್ರಮಾಣ ಆಧರಿಸಿ, ಆರೋಗ್ಯ ಮತ್ತು ಭವಿಷ್ಯದ ಯೋಗಕ್ಷೇಮ ಖಾತ್ರಿ ಪಡಿಸಲು, ಗಿಗ್ ಸುಂಕ ವಿಧಿಸಲಾಗುತ್ತಿದೆ. ಬಹುರಾಷ್ಟ್ರೀಯ ಕಂಪೆನಿಗಳಿಗೆ, ಇದು ಸಾಮಾಜಿಕ ಹೊಣೆಗಾರಿಕೆಯೂ ಹೌದು, ಎಂದರು.

<><><>

**ಸಚಿವ ಸಂತೋಷ ಲಾಡ್ ಅವರು,** ಬಳಿಕ, 9ನೇ ಜನತಾ ದರ್ಶನವನ್ನು, ಧಾರವಾಡ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ನಡೆಸಿ, ಸಾರ್ವಜನಿಕರಿಂದ 125 ದೂರು, ಅಹವಾಲುಗಳನ್ನು ಸ್ವೀಕರಿಸಿದರು.

<><><>

**ಬೆಳಗಾವಿ ಜಿಲ್ಲೆಯಲ್ಲಿ,** ವಿಕಲಚೇತನರ ಅಭಿವೃದ್ಧಿ ಹಾಗೂ ಹಿರಿಯ ನಾಗರಿಕರ ಸಬಲೀಕರಣದ ನಿಟ್ಟಿನಲ್ಲಿ, ಗಣನೀಯ ಸೇವೆ ಸಲ್ಲಿಸಿದ, ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿ, ನಾಮದೇವ ಬಿಲ್ಕರ್ ಅವರಿಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯ ಮಟ್ಟದ ಸೇವಾ ಸರ್ವೋತ್ತಮ ಪ್ರಶಸ್ತಿ ಪ್ರದಾನ ಮಾಡಿ, ಗೌರವಿಸಿದ್ದಾರೆ.

ಬೆಂಗಳೂರಿನ ವಿಧಾನಸೌಧದ, ಸಮ್ಮೇಳನ ಸಭಾಂಗಣದಲ್ಲಿ ವಿಶೇಷ ಸಮಾರಂಭ ಜರುಗಿತು.

<><><>

**2025 ರ ಮುಂಗಾರು** ರಾಷ್ಟ್ರೀಯ ಸಭೆ, ಇಂದು ಬೆಳಗ್ಗೆ 9 ಗಂಟೆಗೆ, ಧಾರವಾಡ ಕೃಷಿ ವಿಶ್ವವಿದ್ಯಾಲಯದ, ಸಮುದಾಯ ವಿಜ್ಞಾನ ಸಭಾಂಗಣದಲ್ಲಿ ಆಯೋಜಿತವಾಗಿದೆ. ಮುಖ್ಯ ಅಥಿತಿಯಾಗಿ, ಹೊಸ ದಿಲ್ಲಿಯ, ಭಾರತೀಯ ಕೃಷಿ ಸಂಶೋಧನಾ ಮಂಡಳಿಯ, ಬೆಳೆ ವಿಜ್ಞಾನ ವಿಭಾಗದ, ಉಪ ಮಹಾನಿರ್ದೇಶಕ, ಡಿ.ಕೆ. ಯಾದವ್, ಪಾಲ್ಗೊಳ್ಳಲಿದ್ದಾರೆ. ಹೊಸ ದಿಲ್ಲಿಯ ಭಾರತೀಯ ಕೃಷಿ ಸಂಶೋಧನಾ ಮಂಡಳಿ, ಭಾರತೀಯ ಹುಲ್ಲುಗಾವಲು ಮತ್ತು ಮೇವು ಸಂಶೋಧನಾ ಸಂಸ್ಥೆಯ, ದಕ್ಷಿಣ ಪ್ರಾದೇಶಿಕ ಸಂಶೋಧನಾ ಕೇಂದ್ರ, ಧಾರವಾಡ ಹಾಗೂ ಕೃಷಿ ವಿಶ್ವವಿದ್ಯಾಲಯ, ಈ ಮಹತ್ವದ ಸಭೆ ಆಯೋಜಿಸಿವೆ.

<><><>

**ರಾಷ್ಟ್ರ ಖ್ಯಾತಿಯ, ಹಿರಿಯ ಸ್ವಾತಂತ್ರ್ಯ ಸೇನಾನಿ,** ಧಾರವಾಡದ ಶಕುಂತಲಾ ಶಂಕರ ಕುರ್ತಕೋಟಿ ಅವರ, ಜನ್ಮ ಶತಮಾನೋತ್ಸವ, ವರ್ಷವಿದು. ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ, ಅನೇಕ ಸಲ ಸೆರೆಮನೆ ವಾಸ, ಸ್ವದೇಶಿ ವಸ್ತ್ರ ಚಳವಳಿ ಹಾಗೂ ಗಾಂಧಿ ವಿಚಾರ ಧಾರೆಗಳನ್ನು ಪ್ರಚುರ ಪಡಿಸಲು ತಮ್ಮ ಬದುಕನ್ನು ಮುಡುಪಿಟ್ಟ ಚೇತನ, ಶಕುಂತಲಾ ಕುರ್ತಕೋಟಿ.

<><><>

**ಇಂದು ಸಂಜೆ 5.30ಕ್ಕೆ,** ಧಾರವಾಡದ ಬನಶಂಕರಿ ಕಲಾ ಮಂಟಪದಲ್ಲಿ, 'ಶಕುಂತಲಾ ಕುರ್ತಕೋಟಿ ಒಂದು ಸರಳ, ಸಾರ್ಥಕ ಬದುಕು' ಜನ್ಮಶತಮಾನೋತ್ಸವ ಕಾರ್ಯಕ್ರಮ ಆಯೋಜಿತವಾಗಿದೆ.

<><><>

**ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ,** ಧಾರವಾಡ ಗಾಂಧಿ ಶಾಂತಿ ಪ್ರತಿಷ್ಠಾನ ಕೇಂದ್ರದ ಅಧ್ಯಕ್ಷ, ಸಂಜೀವ ಕುಲಕರ್ಣಿ.

<><><>

**ಸಂಜೀವ ಕುಲಕರ್ಣಿ ಧ್ವನಿ 45 ಸೆಕೆಂದುಗಳು**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ**

**ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.**

<><><>

**ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ,** ಇದೇ 26 ರಂದು ವಿಶೇ ’ ಲೋಕ ಅದಾಲತ್ ಹಾಗೂ ಎರಡನೇ ರಾಷ್ಟ್ರೀಯ ಲೋಕ ಅದಾಲತ್‌ನ್ನು, ಜುಲೈ 12 ರಂದು ಆಯೋಜಿಸಿದೆ ಎಂದು, ನ್ಯಾಯಮೂರ್ತಿ ಹಾಗೂ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ, ಕಾರ್ಯನಿರ್ವಾಹಕ ಅಧ್ಯಕ್ಷ ವಿ.ಕಾಮೇಶ್ವರರಾವ್ ತಿಳಿಸಿದ್ದಾರೆ. ಬೆಂಗಳೂರು ಉಚ್ಚ ನ್ಯಾಯಾಲಯದ, ಅಡ್ವೊಕೇಟ್ ಜನರಲ್ ಕೊಠಡಿಯಲ್ಲಿ ಆಯೋಜಿಸಿದ್ದ, ಪೂರ್ವಭಾವಿ ಸಭೆಯಲ್ಲಿ ಅವರು, ಮಾತನಾಡಿದರು. ಇತ್ಯರ್ಥವಾಗದೇ ಬಾಕಿ ಉಳಿದಿರುವ ಪ್ರಕರಣಗಳ ಬಗ್ಗೆ, ಎಲ್ಲ ಮಧ್ಯಸ್ಥಿಕೆದಾರರು, ಇಲಾಖೆಗಳು ಹಾಗೂ ನಿಗಮಗಳ ಅಧಿಕಾರಿಗಳಿಂದ, ಮಾಹಿತಿ ಪಡೆದ, ನ್ಯಾಯಮೂರ್ತಿಗಳು, ರಾಜೀ ಸಂಧಾನಕ್ಕೆ ಅರ್ಹವಾದ, ಇತ್ಯರ್ಥವಾಗದೆ ಬಾಕಿ ಉಳಿದಿರುವ ಪ್ರಕರಣಗಳಲ್ಲಿ, ಸೂಕ್ತ ಕ್ರಮ ಕೈಗೊಳ್ಳುವಂತೆ, ನಿರ್ದೇಶಿಸಿದರು.

<><><>

**ಬೆಂಗಳೂರಿನ ಅಖಿಲ ಭಾರತೀಯ ಸಾಹಿತ್ಯ ಪರಿಷತ್,** ಧಾರವಾಡದ ವರಕವಿ ದ.ರಾ.ಬೇಂದ್ರೆ ಅವರಿಗೆ, ಜ್ಞಾನಪೀಠ ತಂದುಕೊಟ್ಟ ಕೃತಿ, 'ನಾಕುತಂತಿ' ಮುದ್ರಣಗೊಂಡು 60 ವರ್ಷ ಪೂರ್ಣಗೊಂಡ ಹಿನ್ನೆಲೆ, 'ನಾಕುತಂತಿ ಷಷ್ಟಿಪೂರ್ತಿ' ಕಾರ್ಯಕ್ರಮ, ವರ್ಷಪೂರ್ತಿ ಆಯೋಜಿಸಿದೆ.

ಪ್ರದೇಶ ಸಮಾಚಾರಕ್ಕಾಗಿ, ಈ ಕುರಿತು ಮಾಹಿತಿ ನೀಡಿದ್ದಾರೆ, ಹಾಸನದ ಹಿರಿಯ ವಿದ್ವಾಂಸ, ವೇದಮಂತ್ರಮ್ ಪಾಠಶಾಲೆ ಪ್ರಾಧ್ಯಾಪಕ, ಜಿ.ಬಿ.ಹರೀಶ.

<><><>

**ಜಿ.ಬಿ. ಹರೀಶ ಧ್ವನಿ 45 ಸೆಕೆಂದುಗಳು**

<><><>

**2025ನೇ ಸಾಲಿನ ವಿಶ್ವ ಧ್ವನಿ–ದೃಶ್ಯ ಮನೋರಂಜನಾ ಶೃಂಗ,** ಮೇ ತಿಂಗಳ 1ರಿಂದ 4ರ ವರೆಗೆ, ನಾಲ್ಕು ದಿನಗಳ ಕಾಲ, ಮುಂಬೈನಲ್ಲಿ ನಡೆಯಲಿದೆ. ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಎಲ್. ಮುರುಗನ್ ಮಾಹಿತಿ ನೀಡಿ, ದೇಶದ ವಿವಿಧೆಡೆ, ಅನಿಮೆ ಮತ್ತು ಮಾಂಗಾ ಸ್ಪರ್ಧೆ – ವಾಮ್‌ನ್ನು ಆಯೋಜಿಸಲಾಗಿತ್ತು. ಅಂತಿಮ ಸುತ್ತಿಗೆ ಪ್ರವೇಶಿಸಿದ, 11 ನಗರಗಳ ಸ್ಪರ್ಧಾಳುಗಳು, ಮುಂಬೈ ವೇವ್ಸ್ ಶೃಂಗದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು. ಧ್ವನಿ ಹಾಗೂ ದೃಶ್ಯ ಮಾಧ್ಯಮಕ್ಕೆ ಸಂಬಂಧಿಸಿದ, ವಿವಿಧ ಸ್ಪರ್ಧೆಗಳನ್ನು, ಬೆಂಗಳೂರು ಸೇರಿದಂತೆ, ದೇಶದ 11 ನಗರಗಳಲ್ಲಿ ನಡೆಸಲಾಗಿತ್ತು. ಅಂತಿಮ ಸುತ್ತಿನ ಸ್ಪರ್ಧೆ, ಮುಂಬೈಯಲ್ಲಿ ಆಯೋಜನೆಗೊಂಡಿದ್ದು, ವಿಜೇತರು, ಜಪಾನ್ ದೇಶದ ಟೋಕಿಯೋದಲ್ಲಿ, 2026 ರಲ್ಲಿ ನಡೆಯಲಿರುವ, ಅನಿಮೆ ಶೃಂಗದಲ್ಲಿ ಪಾಲ್ಗೊಳ್ಳಲಿದ್ದಾರೆ, ಎಂದು ತಿಳಿಸಿದರು.

<><><>

**ಇಂದು 'ಭೂ ದಿನ'.** 'ನಮ್ಮ ಬಲ ನಮ್ಮ ಭೂಮಿ' ಧ್ಯೇಯದೊಂದಿಗೆ, ಭೂ ದಿನವನ್ನು ಆಚರಿಸಲಾಗುತ್ತಿದೆ. 2030 ರೊಳಗೆ, ಜಾಗತಿಕ ಮಟ್ಟದಲ್ಲಿ, ನವೀಕರಿಸಬಹುದಾದ ಇಂಧನ ಮೂಲಗಳನ್ನು ಬಳಸಿ, ವಿದ್ಯುತ್ ಉತ್ಪಾದನೆಗೆ ಒತ್ತು ನೀಡಲು, ಸಾರ್ವಜನಿಕ ಸಹಭಾಗಿತ್ವಕ್ಕೆ ಮಹತ್ವ ನೀಡುವ ಉದ್ದೇಶದೊಂದಿಗೆ, ಆಚರಿಸಲಾಗುತ್ತಿದೆ. ಸಾಂಘಿಕ ಪ್ರಯತ್ನದ ಮೂಲಕ, ಹವಾಮಾನ ಬದಲಾವಣೆ ಸಮಸ್ಯೆಗಳಿಗೆ ಪರಿಹಾರ ಹಾಗೂ ಜೀವವೈವಿಧ್ಯ ಸಂರಕ್ಷಣೆ, ಪ್ರಸಕ್ತ ಭೂ ದಿನಾಚರಣೆ ಆದ್ಯತೆಯಾಗಿದೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು,** ಬರುವ ಭಾನುವಾರ, 27 ರಂದು, ಆಕಾಶವಾಣಿಯ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ, ದೇಶ ಮತ್ತು ವಿದೇಶಗಳ ಜನರೊಂದಿಗೆ ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳಲಿದ್ದಾರೆ. ಇದು ಮನದ ಮಾತಿನ 121ನೇ ಸಂಚಿಕೆಯಾಗಿದೆ. ಟೋಲ್–ಫ್ರೀ ಸಂಖ್ಯೆ 1800–11–7800 ಅಥವಾ ಮೋದಿ ಅಪ್ಲಿಕೇಶನ್ ಅಥವಾ ಮೈ ಗಾವ್ ಓಪನ್ ಫೋರಂ ಮೂಲಕ, ಜನತೆ ಆನ್‌ಲೈನ್‌ನಲ್ಲಿ, ಈ ತಿಂಗಳ 25ರ ವರೆಗೆ, ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಬಹುದು.

<><><>

**ಈಗ ಸಂಕ್ಷಿಪ್ತ ಸುದ್ದಿಗಳು:**

<><><>

**ನಿವೃತ್ತ ಡಿಜಿಪಿ ಓಂ ಪ್ರಕಾಶ್ ಹತ್ಯೆ** ಪ್ರಕರಣದ ತನಿಖೆ, ವಿವಿಧ ಆಯಾಮಗಳಲ್ಲಿ ನಡೆಯುತ್ತಿದೆ ಎಂದು, ಗೃಹ ಖಾತೆ ಸಚಿವ ಜಿ.ಪರಮೇಶ್ವರ ಬೆಂಗಳೂರಿನಲ್ಲಿ ತಿಳಿಸಿದ್ದಾರೆ.

<><><>

**ಚಿತ್ರದುರ್ಗ ಜಿಲ್ಲೆಯಲ್ಲಿ,** 6 ಬಾಲ ಕಾರ್ಮಿಕರನ್ನು ರಕ್ಷಿಸಿ ಪುನರ್ವಸತಿ ಕಲ್ಪಿಸಲಾಗಿದ್ದು, ನಾಲ್ವರು ಮಾಲೀಕರ ವಿರುದ್ಧ ಮೊಕದ್ದಮೆ ಹೂಡಲಾಗಿದೆ ಎಂದು, ಜಿಲ್ಲಾ ಕಾರ್ಮಿಕ ಅಧಿಕಾರಿ ಅನಿಲ್ ಭಗವತಿ ತಿಳಿಸಿದ್ದಾರೆ.

<><><>

**ಬೆಂಗಳೂರಿನ ಸಂತ ಕವಿ ಕನಕದಾಸ ಮತ್ತು ತತ್ವ** ಪದಕಾರರ ಅಧ್ಯಯನ ಕೇಂದ್ರ ಹಾಗೂ ಹಾವೇರಿಯ ಗುದ್ಲೆಪ್ಪ ಹಳ್ಳಿಕೇರಿ ಪದವಿ ಮಹಾವಿದ್ಯಾಲಯದಲ್ಲಿ, ಇಂದು ಮತ್ತು ನಾಳೆ, 'ಭಾರತೀಯ ಭಕ್ತಿ ಪರಂಪರೆ ಮತ್ತು ಕರ್ನಾಟಕ', ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿತವಾಗಿದೆ.

<><><>

**ಮುತ್ಸದ್ದಿ ಬಿ.ಬಸವಲಿಂಗಪ್ಪನವರ** ಜನ್ಮ ದಿನದ ಹಿನ್ನೆಲೆ, ಹುಬ್ಬಳ್ಳಿಯ ಇಂದಿರಾ ಗಾಜಿನ ಮನೆ ಆವರಣದಲ್ಲಿರುವ ಪ್ರತಿಮೆಗೆ, ಪಾಲಿಕೆ ಮೇಯರ್ ರಾಮಪ್ಪ ಬಡಿಗೇರ, ಗೌರವ ಅರ್ಪಿಸಿದರು.

<><><>

**ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ,** ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ ಜಿ. ಅವರು, ಕಲಬುರಗಿಯಲ್ಲಿ ಇಂದು ಬೆಳಗ್ಗೆ 10 ಗಂಟೆಗೆ, ಜಿಲ್ಲಾಧಿಕಾರಿ ಕಚೇರಿಯಲ್ಲಿ, ಅಹವಾಲು ಆಲಿಸಲಿದ್ದಾರೆ.

<><><>

**ಕಲಬುರಗಿ ರಂಗಾಯಣದಲ್ಲಿ,** ಇಂದು ಮಧ್ಯಾಹ್ನ 3 ಗಂಟೆಗೆ, 'ಮಕ್ಕಳ ಹಬ್ಬ' ಬೇಸಿಗೆ ರಂಗ ತರಬೇತಿ ಶಿಬಿರ ಉದ್ಘಾಟನೆಯಾಗಲಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಪರಿಸರ ಸ್ನೇಹಿ ಹೆಜ್ಜೆ;** ಹಾಸನ ತಾಲೂಕು, ಬಿರಡಹಳ್ಳಿ ಗ್ರಾಮ ಪಂಚಾಯಿತಿ, ರಾಷ್ಟ್ರೀಯ ಪುರಸ್ಕಾರಕ್ಕೆ ಆಯ್ಕೆ.
- **ಗಿಗ್ ಕಾರ್ಮಿಕರ ಯೋಗಕ್ಷೇಮ;** ಅಗ್ರಿಗೇಟರ್ ಸಂಸ್ಥೆಗಳಿಂದ, ಶೇಕಡ 5ರಷ್ಟು ಸುಂಕ ಸಂಗ್ರಹಕ್ಕೆ, ಕಾರ್ಮಿಕ ಇಲಾಖೆ, ನಿಶ್ಚಯ.
- **ರಾಜಿ ಸಂಧಾನಕ್ಕೆ ಯೋಗ್ಯ ಪ್ರಕರಣ;** 26ನೇ ತಾರೀಖು, ವಿಶೇ ' ಲೋಕ ಅದಾಲತ್‌ನಲ್ಲಿ, ಇತ್ಯರ್ಥ – ನ್ಯಾಯಮೂರ್ತಿ ವಿ.ಕಾಮೇಶ್ವರರಾವ್.
- **ವರಕವಿ ದ.ರಾ.ಬೇಂದ್ರೆ ಅವರ,** 'ನಾಕುತಂತಿ' ಕೃತಿಯ ಷಷ್ಟಿಪೂರ್ತಿ; ಅಖಿಲ ಭಾರತ ಸಾಹಿತ್ಯ ಪರಿಷತ್ತಿನಿಂದ, ವರ್ಷಪೂರ್ತಿ ಕಾರ್ಯಕ್ರಮ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>